1.30 P M.

CALLING ATTENTION TO MATTERS OF URGENT PUBLIC IMPORTANCE

re. (*i*) *Mis appropraition in the District Marketing Co-operative Society, Hassan.*

SRI K.H. HANUME GOWDA:—Sir, I call the attention of the Minister for Co-operation to the misappropriation of Rs. 3 lakhs in the District Marketing Co-operative Society, Hassan.

SRI A.B. JAKANUR (Minister for Co-operation):— I wish to make the following statement:

The District Marketing Co-operative Society Ltd., Hassan has been registered under the Karnataka Co-operative Societies Act in the year 1949. The area of operation of this society extends to the whole of Hassan District. The Society has been functioning from 1949 and is not transacting business for the last one year.

2 The Accounts of the District Marketing Co-operative Society Ltd., has been audited for the year 1976-77 and 1977-78. It is revealed that there are some instances of misappropriation during 78-79 also. A total amount of Rs. 1,63,794.53 has been misappropriated by some of the officials. A sum of Rs. 14,432 05 has been recovered. Instructions have been issued to take action on the Criminal and Civil side to recover the moneys misappropriated and punish the guilty.

3 The Society has one building consisting of following (a) Two shop-cum-godowns (ground floor) and (b) One Office (first floor). The Board of Management has taken a decision to let out one shop-cum-godowns for a period of 3 years and has taken action to notify the same. Five applications were received in response to the notification, of which one is from the TAPCMS also, offering a rent of Rs. 250/-pm. Sri Ajit, Son of Sri Murarappa, Hassan District, Hassan offered monthly rent of Rs. 525 and an advance of Rs 12,000-. Since the other four offers including the TAPCMS were not advantageous, the offer of Sri Ajit has been accepted by the Society. It was decided by the society to let out the shop-cum-godown for a period of 3 years to Sri Ajit on the above terms. The party has deposited the amount of Rs. 12,000- and the agreement has been also executed. The Society has not yet given possession of the shop-cum-godown to Sri Ajit.

ಶ್ರೀ ಕೆ. ಎಚ್. ಹನುಮೇಗೌಡ.— ಸ್ವಾಮಿ, ಮಾನ್ಯ ಸಚಿವರು ಮಾಡಿರತಕ್ಕಂಥ ಹೇಳಿಕೆ ಸತ್ಯಕ್ಕೆ ಬಹಳ ದೂರವಾದುದು. ೧೯೪೯ನೇ ಇಸವಿಯಲ್ಲಿ ಪ್ರಾರಂಭವಾದ ಈ ಸೊಸೈಟಿ ಲಕ್ಷಾಂತರ ರೂಪಾಯಿಗಳಷ್ಟು ಲಾಭ ಮಾಡಿದೆ. ರೈತರು ಕೊಟ್ಟಂತಹ ಷೇರು ಹಣ, ಸರ್ಕಾರದವರು ಕೊಟ್ಟ ಷೇರು ಹಣ, ಈ ಸೊಸೈಟಿ ಪಡೆದಂಥ ಲಾಭ. ಡಿಸ್ಟ್ರಿಕ್ಟ್ ಬ್ಯಾಂಕ್‌ನಿಂದ ಪಡೆದ ಒಂದೂವರೆ ಲಕ್ಷ ರೂಪಾಯಿಗಳನ್ನೆಲ್ಲಾ ಸೇರಿಸಿದರೆ ೩ ಲಕ್ಷ ರೂಪಾಯಿಗಳ ಮೇಲಾಗುತ್ತದೆ. ಇಷ್ಟು ಹಣವನ್ನು ಸಹ ವ್ಯವಸ್ಥಿತ ರೀತಿಯಲ್ಲಿ ಒಂದು ಪೈಸೆಯನ್ನೂ ಬಿಡದಂತೆ ದುರುಪಯೋಗಪಡಿಸಿಕೊಂಡಿದ್ದಾರೆ. ಅಲ್ಲಿ ಈಗಿರುವುದು ಒಂದು ಬೋರ್ಡು ಮತ್ತು ಎರಡು ಕುರ್ಚಿಗಳು ಮಾತ್ರ. ಆದರೂ ಸಹ ಇಲ್ಲಿ ಮಾನ್ಯ ಮಂತ್ರಿಗಳು ದುರುಪಯೋಗವಾಗಿರತಕ್ಕಂಥ ಹಣ ಕೇವಲ ೧,೬೩,೭೯೪–೫೩ ರೂಪಾಯಿಗಳು ಎಂದು ಹೇಳಿದ್ದಾರೆ. ಯಾವ ಆಧಾರದ ಮೇಲೆ ಇಂತಹ ಸತ್ಯಕ್ಕೆ ದೂರವಾದ ಹೇಳಿಕೆ ಕೊಟ್ಟಿದ್ದಾರೆಂದು ನಾನು ಕೇಳಬಯಸುತ್ತೇನೆ? ಆ ಸೊಸೈಟಿ ಇರುವ ಕಡೆಯಲ್ಲಿಯೇ ಡೆಪ್ಯೂಟಿ ರಿಜಿಸ್ಟ್ರಾರ್, ಅಸಿಸ್ಟೆಂಟ್ ರಿಜಿಸ್ಟ್ರಾರ್ ಹಾಗೂ ಅನೇಕ ಜನ ಅಧಿಕಾರ ವರ್ಗದವರು ಇದ್ದಾರೆ. ಅವರೆಲ್ಲರೂ ಇದ್ದ ಸಹ ಅಲ್ಲಿ ಇಷ್ಟೊಂದು ಹಣ ದುರುಪಯೋಗವಾಗುವವರೆಗೂ ಏನು ಮಾಡುತ್ತಿದ್ದರು ? ಅಲ್ಲಿ ಪ್ರತಿ ವರ್ಷವೂ ಆಡಿಟ್ ಆಗುತ್ತಿರಲಿಲ್ಲವೇ ? ಪ್ರತಿ ವರ್ಷ ಸ್ಟಾಕ್ ಚೆಕ್ಕಿಂಗ್ ಆಗುತ್ತಿರಲಿಲ್ಲವೇ ? ಆ ಸೊಸೈಟಿಯನ್ನು ಆಡಿಟ್ ಮಾಡಿದವರು, ಅಲ್ಲಿ ನಡೆದಂಥ ದುರುಪಯೋಗವನ್ನು ಏತಕ್ಕೆ ಬೆಳಕಿಗೆ ತರಲಿಲ್ಲ ? ಇದಕ್ಕೆಲ್ಲಾ ಮಾನ್ಯ ಸಚಿವರು ವಿವರಣೆ ಕೊಡಬೇಕು.

ಇನ್ನು ಅಲ್ಲಿ ಎಲ್ಲಾ ಹಣವನ್ನು ತಿಂದು ಮುಗಿಸಿದ ಮೇಲೆ ಅದನ್ನು ಮುಂದುವರಿಸಿಕೊಂಡು ಹೋಗಲು ಕಾರಣವೇನು ? ಸೂಪರ್‌ಸೀಡ್ ಮಾಡಲು ಏತಕ್ಕೆ ಕ್ರಮ ತೆಗೆದುಕೊಂಡಿಲ್ಲ? ಅಲ್ಲಿ ಹಣ ದುರುಪಯೋಗವಾಗಿದೆ ಎಂದು ರಿಪೋರ್ಟ್ ಕೊಟ್ಟವರು ಯಾರು ? ಯಾವ ಕಾರಣಕ್ಕಾಗಿ ಅವರು ರಿಪೋರ್ಟ್ ಕೊಡಲು ತಡ ಮಾಡಿದರು ? ಆ ಸೊಸೈಟಿಯ ಮೂಲಧನವೆಷ್ಟು ? ಡಿ.ಸಿ.ಸಿ. ಬ್ಯಾಂಕ್‌ನಿಂದ ಪಡೆದ ಹಣದಲ್ಲಿ ಒಂದು ಪೈಸೆಯನ್ನು ಸಹ ವಾಪಸ್ ಕೊಟ್ಟಿಲ್ಲ. ಈ ಮಾತನ್ನು ನಾನು ಖಚಿತವಾಗಿ ಹೇಳುತ್ತಿದ್ದೇನೆ. ಈ ಬೊದಲು ಆ ಸೊಸೈಟಿ ಎಷ್ಟು ಲಾಭ ಮಾಡಿತ್ತು ಎಂಬ ಬಗ್ಗೆ ಮಾನ್ಯ ಮಂತ್ರಿಗಳು ವಿವರಣೆ ಕೊಡಬೇಕು ಮತ್ತು ನಿಜಾಂಶವನ್ನು ಮರೆಮಾಚದೆ ನಾನು ಕೇಳಿದ ಎಲ್ಲ ಅಂಶಗಳಿಗೂ ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎ. ಬಿ. ಜಕನೂರ್. — ಮಾನ್ಯ ಸದಸ್ಯರು ಅಲ್ಲಿ ೩ ಲಕ್ಷ ರೂಪಾಯಿಗಳಿಗೂ ಮೇಲ್ಪಟ್ಟು ಹಣ ದುರುಪಯೋಗವಾಗಿದೆ ಎಂದು ಹೇಳಿದರು. ಇಲ್ಲಿ ಮಿಸ್ ಅಪ್ರೋಪ್ರಿಯೇಷನ್ ಆಗಿರತಕ್ಕಂಥ ಹಣದ ಬಗ್ಗೆ ವಿವರ ಕೊಡಲಾಗಿದೆ. ಇವರ ಜೊತೆಗೆ ಮಿಸ್-ಯುಟಿಲೈಜೇಷನ್ ಸಹ ಆಗಿದೆ. There is also a mis-utilisation of certain amounts which is of the order of Rs. 1,68,670-75. ಇವೆರಡನ್ನೂ ಸೇರಿಸಿದರೆ ಮಾನ್ಯ ಸದಸ್ಯರು ಹೇಳಿದಂತೆ ಹಣದ ದುರುಪಯೋಗ ೩ ಲಕ್ಷ ರೂಪಾಯಿಗಳ ಮೇಲಾಗುತ್ತದೆ. ಸಾಮಾನುಗಳನ್ನು ತೆಗೆದುಕೊಳ್ಳಲು ಸಿಕ್ಕಿದವರಿಗೆಲ್ಲಾ ಅಡ್ವಾನ್ಸ್ ಕೊಟ್ಟಿದ್ದಾರೆ, Mis-utilisation is also against rules, bye-laws and provisions of the Act. ಇದರ ಬಗ್ಗೆ ಅಧಿಕಾರಿಗಳು ಸುಮ್ಮನೆ ಕುಳಿತಿಲ್ಲ. ಕೆಲವರ ಮೇಲೆ ಈಗಾಗಲೇ ಕ್ರಮ ತೆಗೆದುಕೊಂಡಿದ್ದಾರೆ. ಈಗಾಗಲೇ ೧೪,೪೩೨–೦೫ ರೂಪಾಯಿಗಳನ್ನು ವಸೂಲಿ ಮಾಡಿದ್ದಾರೆ. ಇನ್ನೂ ಕೆಲವರಿಂದ ಹಣ ವಸೂಲಿ ಮಾಡಲು ಕಾನೂನು ಪ್ರಕಾರ ಕ್ರಮ ತೆಗೆದುಕೊಂಡಿದ್ದಾರೆ The Joint Registrar has stated that it is better to approach the Civil Court to file a suit. ಆ ಪ್ರಕಾರ ಕ್ರಮ ತೆಗೆದುಕೊಳ್ಳಲಾಗಿದೆ. ಈಗಾಗಲೇ ಒಂದು ಕೇಸ್‌ನಲ್ಲಿ ಡಿಕ್ರಿಯಾಗಿ ಡಿಕ್ರೀಟರ್ ಅಮೌಂಟನ್ನು ವಸೂಲಿ ಮಾಡುತ್ತಿದ್ದಾರೆ. ಆ ಸೊಸೈಟಿಯಲ್ಲಿ ಇಷ್ಟೊಂದು ಹಣ ದುರುಪಯೋಗವಾಗಿದ್ದರೂ ಸಹ, ದುಂದುಗಾರಿಕೆ ನಡೆದಿದ್ದರೂ ಸಹ ಅಲ್ಲಿನ ಆಡಳಿತ ವರ್ಗದವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದು ಕೇಳಿದ್ದಾರೆ. ಮತ್ತು ಏತಕ್ಕೆ ಆ ಸೊಸೈಟಿಯನ್ನು ಸೂಪರ್‌ಸೀಡ್ ಮಾಡಲಿಲ್ಲವೆಂದು ಕೇಳಿದ್ದಾರೆ. ಆ ಬಗ್ಗೆಯೂ ನಾವು ಪರಿಶೀಲನೆ ಮಾಡುತ್ತಿದ್ದೇವೆ. ಆದರೆ ಅದನ್ನು ಸೂಪರ್‌ಸೀಡ್ ಮಾಡಿದರೆ ಸಂಬಂಧಪಟ್ಟವರು ಹೈಕೋರ್ಟಿಗೆ ಹೋಗಿ ಸ್ಟೇ ಆರ್ಡರ್ ತರಬಹುದೆಂಬ ಕಾರಣದಿಂದ ನಿಧಾನ ಮಾಡಿದ್ದೇನೆ. ಅಲ್ಲಿ ಹಣ ದುರುಪಯೋಗಪಡಿಸಿಕೊಂಡವರಿಂದ ಹಣ ವಸೂಲಿ ಮಾಡಲು ಸರಿಯಾದ ಕ್ರಮ ತೆಗೆದುಕೊಳ್ಳುತ್ತೇವೆ ಮತ್ತು ಮುಂದೆ ಆ ಸೊಸೈಟಿ ಸರಿಯಾದ ರೀತಿಯಲ್ಲಿ ನಡೆಯುವ ಹಾಗೆ ಪ್ರಯತ್ನ ಮಾಡುತ್ತೇವೆ.

ಶ್ರೀ ಕೆ. ಎಚ್. ಹನುಮೇಗೌಡ – ಮಾನ್ಯ ಮಂತ್ರಿಗಳು ಇಲ್ಲಿ ೧,೬೮,೬೭೦–೭೫ ರೂಪಾಯಿ ಗಳಷ್ಟು ಹಣ ಮಿಸ್–ಯುಟಿಲೈಜೇಷನ್ ಆಗಿದೆ ಎಂದು ಹೇಳಿದರು. ದಾರಿಯಲ್ಲಿ ಹೋಗು ವವರಿಗೆಲ್ಲಾ ಕರೆದು ಸಾಲ ಕೊಟ್ಟಿದ್ದಾರೆ. ಅಂದರೆ ಇಂತಹವರಿಗೆ ೭೫ ಸಾವಿರ ರೂಪಾಯಿ ಸಾಲ ಕೊಡಲಾಗಿದೆ ಇಂತಹವರಿಗೆ ಗೊಬ್ಬರ–ಬೀಜ ಕೊಳ್ಳಲು ೪೨ ಸಾವಿರ ರೂಪಾಯಿ ಸಾಲ ಕೊಡಲಾಗಿದೆ ಎಂದು ಕಳ್ಳ ಲೆಕ್ಕವನ್ನು ಬರೆದಿದ್ದಾರೆ. ಯಾರಿಗೂ ಅನುಮಾನ ಬರದಂತೆ ಹಣದದುರುಪಯೋಗ ಮಾಡಿ ದ್ದಾರೆ. ಬೇರೆಯವರಿಗೆ ಹಣ ಕೊಟ್ಟಂತೆ ತೋರಿಸಿ ತಾವೇ ತಿಂದು ಹಾಕಿದ್ದಾರೆ. ಇದು ಒಂದು ವರ್ಷದ ವ್ಯವಹಾರವಲ್ಲ. ೨–೩ ವರ್ಷಗಳ ವ್ಯವಹಾರ. ಈ ರೀತಿ ನಡೆದಿದ್ದರೂ ಸಹ ಆ ಸೊಸೈಟಿ ಯನ್ನು ಸೂಪರ್‌ಸೀಡ್ ಮಾಡಲಿಲ್ಲ ಮತ್ತು ದುಡ್ಡನ್ನು ಸಂಬಂಧಪಟ್ಟವರಿಂದ ವಸೂಲಿ ಮಾಡಲಿಲ್ಲ ವೆಂದರೆ, ಇನ್ನು ಇವರು ಏನು ಮಾಡತ್ತಿದ್ದಾರೆಂದು ನನಗೆ ಗೊತ್ತಾಗುತ್ತಿಲ್ಲ. ಆದೇ ಹಳ್ಳಿ ರೈತ ೧೦ ರೂಪಾಯಿ ಕಂದಾಯ ಕೊಡದಿದ್ದರೆ ಆತನ ಹೆಡಪಿಯ ತಾಳಿಯನ್ನು ಹರಾಜು ಹಾಕಿ ಆ ಹಣವನ್ನು ವಸೂಲಿ ಮಾಡಿಕೊಂಡು ಬರುತ್ತಾರೆ. ಆದರೆ ಇಲ್ಲಿ ಕಳೆದ ೨–೩ ವರ್ಷಗಳಿಂದ ಮೂರೂವರೆ ಲಕ್ಷಕ್ಕೂ ಹೆಚ್ಚಿನ ಹಣ ದುರುಪಯೋಗವಾಗಿದ್ದರೂ ಸಹ ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳದಿರಲು ಕಾರಣವೇನು ? ಏತಕ್ಕೆ ಕೇಸುಗಳನ್ನು ಹಾಕಿಲ್ಲ ? ಈ ಹಣಕ್ಕೆ ಮತ್ತು ಈ ಹಣದ ಮೇಲಿನ ಬಡ್ಡಿಗೆ ಯಾರು ಜವಾಬ್ದಾರರು ? ಈ ಮೊದಲು ಈ ಸೊಸೈಟಿ ಬಹಳ ಚೆನ್ನಾಗಿ ನಡೆಯುತ್ತಿತ್ತು. ರೈತರಿಗೆ ಗೊಬ್ಬರ ಮತ್ತು ಬೀಜವನ್ನು ತಂದು ಹಂಚಲಾಗುತ್ತಿತ್ತು. ಈ ಕಾರಣದಿಂದ ರೈತರು ನಂಬಿ ಷೇರು ಹಣವನ್ನು ಕೊಟ್ಟಿದ್ದರು. ಆದರೆ ಈಗ ಅಲ್ಲಿ ಅನ್ಯಾಯದ ಪರಮಾವಧಿ ಎಲ್ಲಿಯವರೆಗೆ ಹೋಗಿ ಮುಟ್ಟಿದೆ ಎಂದರೆ, ಕೆಲವು ಕಡೆಗಳಲ್ಲಿ ೫೦ ಲಕ್ಷ ರೂಪಾಯಿಗಳ ವ್ಯವಹಾರ ನಡೆಯುತ್ತಿದ್ದರೆ, ಒಂದು ಲಕ್ಷ ರೂಪಾಯಿಗಳವರೆಗೆ ಹಣ ತಿಂದು ಹಾಕಿರುವುದನ್ನು ನಾವು ಕೇಳುತ್ತಿದ್ದೆವು, ಆದರೆ ಇಲ್ಲಿ ಪೂರ್ತಿ ಯಾಗಿ ಹಣವನ್ನು ತಿಂದುಹಾಕಿದ್ದಾರೆ. ಆದರೂ ಸಹ ಮಾನ್ಯ ಮಂತ್ರಿಗಳು ಇಷ್ಟೊಂದು ಲಘುವಾಗಿ ಉತ್ತರ ಹೇಳುವುದಾದರೆ, ಸರ್ಕಾರದ ಹಣಕ್ಕೆ ಭದ್ರತೆಯಾದರೂ ಎಲ್ಲಿರುತ್ತದೆ ? ಇದಕ್ಕೆ ಮಾನ್ಯ ಮಂತ್ರಿಗಳು ಏನು ಉತ್ತರ ಕೊಡುತ್ತಾರೆ ?

ಶ್ರೀ ಎ. ಬಿ. ಜಕನೂರ್.—ಸ್ವಾಮಿ, ಮಾನ್ಯ ಸದಸ್ಯರು ಇದರ ಬಗ್ಗೆ ಸರ್ಕಾರದವರು ಲಘು ವಾದ ಹೇಳಿಕೆ ಕೊಡುವುದು ಸರಿಯಲ್ಲವೆಂದು ಹೇಳಿದರು, ನಾವು ಈಗಾಗಲೇ ಕ್ರಮ ಕೈಕೊಂಡಿದ್ದೇವೆ, ಕೆಲವೊಂದು ವಿವರಗಳನ್ನು ಕೊಡಬೇಕೆಂದರೆ, ಬಿ. ಆರ್. ನಾಗರಾಜ್ ಅಕೌಂಟೆಂಟ್ ಇವರ ಕಡೆಯಿಂದ ೭,೭೩೧–೫೦ ರೂಪಾಯಿಗಳನ್ನು ರಿಕವರಿ ಮಾಡಲಾಗಿದೆ. ಮಂಜೇಗೌಡ, ಕ್ಲರ್ಕ್, ಇವರ ಕಡೆಯಿಂದ ೭,೫೦೦ ರೂಪಾಯಿಗಳನ್ನು ರಿಕವರಿ ಮಾಡಲಾಗಿದೆ. ಡಿ. ಬಿ. ಬಸವೇಗೌಡ, ಇವರಿಗೆ ಸಂಬಂಧಪಟ್ಟಂತೆ ಕೇಸು ವಗೈರೆ ಹಾಕಿ ಕ್ರಮ ಕೈಕೊಳ್ಳಲಾಗಿದೆ. ಡಿ. ಕೆ. ಶ್ರೀಕಂಠೇಗೌಡ, ಸೆಕ್ರೆಟರಿ, ಇವರ ಮೇಲೂ ಕ್ರಮ ತೆಗೆದುಕೊಳ್ಳಲಾಗಿದೆ. ಮೊದಲು ಇವರನ್ನು ಸಸ್ಪೆಂಡ್ ಮಾಡಲಾಗಿತ್ತು. ಆದರೆ ಓತಿಂಗಳೊಳಗೆ ಎನ್‌ಕ್ವೈರಿ ಪ್ರೋಸೀಡಿಂಗ್ಸ್ ಮುಗಿಯದ ಕಾರಣ ಅವರನ್ನು ಮತ್ತೆ ರೀ—ಇನ್ಸ್‌ಟೇಟ್ ಮಾಡಿಕೊಂಡು ಮತ್ತೊಂದು ಕಡೆಗೆ ವರ್ಗ ಮಾಡಲಾಗಿದೆ. ಈಗ ಅಲ್ಲಿ ಕೆಲಸ ಮಾಡಲು ಮತ್ತೊಬ್ಬರು ಸೆಕ್ರೆಟರಿ ಅವರನ್ನು ನೇಮಕ ಮಾಡಲಾಗಿದೆ. ಈ ರೀತಿಯಾಗಿ ಅವಶ್ಯಕ ಕ್ರಮಗಳನ್ನು ಕೈಕೊಳ್ಳಲಾಗಿದೆ. ಅಲ್ಲಿ ೧,೬೮,೬೭೦–೭೫ ರೂಪಾಯಿಗಳ ೧೦–೧೧ ಜನರ ಹೆಸರಿನಲ್ಲಿ ಮಿಸ್ – ಯುಟಿಲೈಜೇಷನ್ ಆಗಿದೆ. ಅಷ್ಟು ಹಣವನ್ನೂ ಸಹ ವಸೂಲಿ ಮಾಡುವುದಕ್ಕೆ ನಾವು ಕ್ರಮ ಕೈಕೊಂಡಿದ್ದೇವೆ.

ಶ್ರೀ ಕೆ. ಎಚ್. ಹನುಮೇಗೌಡ.—ಇದು ನಾಲ್ಕೈದು ವರ್ಷಗಳಿಂದ ನಡೆದಿರತಕ್ಕ ಅವ್ಯವಹಾರ. ಆ ಸೊಸೈಟಿಯಲ್ಲಿ ಯಾರು ಆಡಿಟ್ ಮಾಡಿದ್ದಾರೆ, ಯಾರು ಸ್ಪಾಟ್ ಚೆಕ್ ಮಾಡಿದ್ದಾರೆ, ಅವರ ಮೇಲೆ ಏಕೆ ಕ್ರಮ ತೆಗೆದುಕೊಳಲಿಲ್ಲ ? ಬರೀ ದುಡ್ಡು ತಿಂದವರ ಮೇಲೆ ಆಕ್ಷನ್ ತೆಗೆದುಕೊಂಡಿದ್ದೀರಿ, ಆದರೆ ಸ್ಪಾಟ್ ಚೆಕ್ ಮಾಡುವಾಗ, ಆಡಿಟ್ ಮಾಡುವಾಗ ಸರಿಯಾಗಿದೆ ಎಂದು ಸುಳ್ಳು ಸುಳ್ಳು ಸರ್ಟಿಫಿಕೇಟ್ ಕೊಟ್ಟವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಎ. ಬಿ. ಜಕನೂರ್.—ಆಡಿಟ್ ಮಾಡಿ ಸರಿಯಾಗಿದೆ ಎಂದು ಯಾರೂ ತೋರಿಸಿಲ್ಲ. ೧೯೭೭–೭೮ರಲ್ಲಿ ಎಷ್ಟು ಮಿಸ್–ಅಪ್ರೋಪ್ರಿಯೇಷನ್ ಆಗಿದೆ ಎಷ್ಟು ಮಿಸ್–ಯುಟಿಲೈಜ್ ಆಗಿದೆ ಎಂದು ಅವರೇ ತೋರಿಸಿದ್ದಾರೆ. ೧೯೭೮–೭೯ನೇ ಸಾಲಿನದು ಆಡಿಟ್ ಮಾಡುತ್ತಾ ಇದ್ದಾರೆ. ೮೩ ಸಾವಿರ ರೂಪಾಯಿ ಗಳ ತನಕ ಮಿಸ್ ಅಪ್ರೋಪ್ರಿಯೇಷನ್ ಆಗಿದೆ ಎಂದು ಈಗಾಗಲೇ ಗೊತ್ತಾಗಿದೆ. ಆಡಿಟ್ ಮಾಡಿ

ಸರಿಯಾಗಿದೆ ಎಂದು ಯಾರೂ ಸರ್ಟಿಫಿಕೇಟ್ ಕೊಟ್ಟಿಲ್ಲ. ಇದರ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಳ್ಳಲಿಕ್ಕೆ ಹಿಂಜರಿಯುವುದಿಲ್ಲ.

ಶ್ರೀ ಎಸ್. ಎಂ ಶೀರ್ನಾಳಿ ಚಂದ್ರಶೇಖರ್ (ಹೊಸನಗರ) —ಶಿವಮೊಗ್ಗ ಜಿಲ್ಲೆಯ ಹೊಸನಗರ ಟೌನಿನಲ್ಲಿ ಆಂದರೆ ಪುರಸಭಾ ಆವರಣದಲ್ಲಿ ಪಾಸ ಮಾಡತಕ್ಕಂಥ ಪ್ರಜೆಗಳು ಕುಡಿಯುವ ನೀರಿಗಾಗಿ ತೀವ್ರವಾಗಿ ಸಂಕಟ ಪಡುತ್ತಿರುವ ವಿಚಾರದ ಬಗ್ಗೆ ಮಾನ್ಯ ನಗರಾಭಿವೃದ್ಧಿ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್ (ವಸತಿ ಹಾಗೂ ನಗರಾಭಿವೃದ್ಧಿ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಈ ಕೆಳಕಂಡ ಹೇಳಿಕೆಯನ್ನು ಮಾಡಲು ತಮ್ಮ ಅನುಮತಿಯನ್ನು ಕೋರುತ್ತೇನೆ.

The water Supply Scheme for Hosanagar Town was commissioned in 1972 and is being maintained by the Town Municipal Committee, Hosanagar, since 5-12-1973. The present source of water supply consists of 3 bore-wells yielding, totally about 2860 Gallons per hour. The population of the town as per 1971 census is 3,800. The per capita supply is much below the standard. The borewells in this area are generally not successful and yield goes on dwindling during summer. The Geologist has opined that borewell as a source of supply to town like Hosanagar will not be successful due to yield being low. It is therefore proposed to provide comprehensive water supply scheme to Hosanagar with a permanent source *viz.*, Kallahalla to solve the drinking water supply problem. The Kallahalla Nala is flowing at a distance of 1½ km from the town towards West. A line estimate amounting to Rs. 10 lakhs has been prepared by the Karnataka Urban Water Supply and Drainage Board. If the Town Municipal Committee, Hosanagar comes forward to pay 10% contribution of the cost along with the necessary resolution, regarding financial feasibility etc., then the scheme will be considered and administrative approval will be accorded.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೇ, ಒಂದು ವಿಚಾರದಲ್ಲಿ ಮಂತ್ರಿಗಳಿಗೆ ನಾನು ಸಂಪೂರ್ಣವಾಗಿ ಅಭಾರಿಯಾಗಿದ್ದೇನೆ. ಏಕೆಂದರೆ, ಹೊಸನಗರದಲ್ಲಿ ತೀವ್ರವಾದಂಥ ಕುಡಿಯುವ ನೀರಿನ ಅಭಾವವಿದೆ ಎನ್ನುವುದನ್ನು ಆಪರು ಒಪ್ಪಿಕೊಂಡಿದ್ದಾರೆ, ಅದಕ್ಕೆ ವಂದನೆಗಳು. ನಮ್ಮಲ್ಲಿ ಒಂದು ಗಾದೆಇದೆ, ಅದೇನೆಂದರೆ, ''ಮದುವೆಯಾಗುವವರೆಗೆ ಹುಚ್ಚು ಬಿಡುವುದಿಲ್ಲ, ಹುಚ್ಚು ಬಿಡುವವರೆಗೆ ಮದುವೆಯಾಗುವುದಿಲ್ಲ'' ಎಂದು. ೧೦ ಪರ್ಸೆಂಟ್ ಅಂದರೆ ಒಂದು ಲಕ್ಷ ರೂಪಾಯಿಗಳನ್ನು ಕೊಡಬೇಕಾಗುತ್ತದೆ. ಅದು ಕೇವಲ ಕನಸಿನ ಕುದುರೆ. ಆಕ್ಟ್ಯುಯ್ ತೆಗೆದಿದ್ದಾರೆ, ಆದರೆ ಆಕ್ಟ್ಯುಯ್ ತೆಗೆದ ಮೇಲೆ ಮುನಿಸಿಪಾಲಿಟಿಗೆ ತನ್ನ ನೌಕರರಿಗೆ ಸಂಬಳ ಕೊಡುವುದಕ್ಕೆ ದುಡ್ಡು ಇದೆಯೋ ಇಲ್ಲವೋ ಗೊತ್ತಿಲ್ಲ. ಇದು ಮುಖ್ಯವಾಗಿ ನೀರಿನ ಸಮಸ್ಯೆ ಬೇರೆ ಸಮಸ್ಯೆಗಳಾದರೆ ಲಘುವಾಗಿ ತೆಗೆದುಕೊಳ್ಳಬಹುದು. ಮೂರು ನಾಲ್ಕು ಪರ್ಷಗಳಿಂದ ಅಲ್ಲಿ ಕುಡಿಯುವುದಕ್ಕೆ ನೀರಿಲ್ಲ. ಇಂಥಾ ಒಂದು ಪರಿಸ್ಥಿತಿಯಲ್ಲಿ ಕಾನೂನಿನ ಅಡಚಣೆ ಇದ್ದರೆ ಅದನ್ನು ಸಡಿಲಗೊಳಿಸಿ ಏನಾದರೂ ಪರಿಹಾರ ಕಂಡು ಹಿಡಿಯುತ್ತೀರಾ ? ೧೦ ಪರ್ಸೆಂಟ್ ಅಂದರೆ ಒಂದು ಲಕ್ಷ ರೂಪಾಯಿ ಕೊಡಬೇಕಾಗುತ್ತದೆ ಎಂಬುದು ನನಗೆ ಗೊತ್ತಿದೆ. ಮುನಿಸಿಪಾಲಿಟಿಯನ್ನು ಹರಾಜು ಹಾಕಿದರೂ ಅಷ್ಟು ದುಡ್ಡು ಸಿಗುವುದಿಲ್ಲ. ಇದಕ್ಕೇನು ಮಾಡುತ್ತೀರಿ ?